**ಒ.ಎಸ್.ನಂ. 210/18**

**ಡಿ. ಡಬ್ಲೂ-1**

**ದಿನಾಂಕಃ 22.08.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು :- ವಾದಿ / ಪ್ರತಿವಾದಿ ಪರ ಶ್ರೀ ವಕೀಲರಿಂದಃ-**

ಪುಟ್ಟಚಿಕ್ಕನಾಯಕ ಮತ್ತು ಪುಟ್ಟಸಿದ್ದಮ್ಮ ನನ್ನ ತಂದೆ ತಾಯಿ. ರಾಜನಾಯಕ ನನ್ನ ತಮ್ಮ. ನಂಜನಾಯಕ ನನ್ನ ದೊಡಪ್ಪ. ನನ್ನ ತಂದೆ ಬದುಕಿದ್ದಾರೆ. ವಾದಿ ಏನು ಪರಿಹಾರ ಕೋರಿ ದಾವೆ ಸಲ್ಲಿಸಿದ್ದಾರೆ ಎಂದು ಗೊತ್ತಿಲ್ಲ. ಸರ್ವೇ 111/2 ರಲ್ಲಿ 1 ಎಕರೆ 37 ½ ಗುಂಟೆ ಇದ್ದು ಒಟ್ಟು 3 ಎಕರೆ 35 ಗುಂಟೆ ಇರುತ್ತದೆ. ಸದರಿ ಸ್ವತ್ತು ಮೂಲತಃ ನಂಜನಾಯಕ ರವರಿಗೆ ಸೇರಿದ ಸ್ವತ್ತು ಎಂದರೆ ಸರಿ. ಸದರಿ ನಂಜನಾಯಕ ನನ್ನ ತಂದೆಗೆ ಮತ್ತು ವಾದಿ ತಂದೆಗೆ 1 ಎಕರೆ 37 ½ ಗುಂಟೆ ಯಂತೆ ದಾನ ಪತ್ರ ಬರೆದು ಕೊಟ್ಟಿರುತ್ತಾರೆ ಎಂದರೆ ವಿಭಾಗ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಸ್ವತ್ತುಗಳಲ್ಲಿ ವಾದಿಗಳು ಮತ್ತು ನಾವು ಸ್ವಾಧೀನ ಇದ್ದೇವೆ ಎಂದರೆ ಸರಿ. ಅದೇ ರೀತಿ MR 19/92-93 ರಂತೆ ಖಾತೆ ಆಗಿರುತ್ತದೆ ಎಂದರೆ ಸರಿ. ರಕ್ತ ಸಂಬಂಧ ಹೊರತುಪಡಿಸಿ ಆಸ್ತಿಗಳಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿ. ವಾದಿಗಳ ಜಮೀನು ಮತ್ತು ನಮ್ಮ ಜಮೀನು ಅಕ್ಕ ಪಕ್ಕ ಇರುತ್ತವೆ ಎಂದರೆ ಸರಿ. ಆ ರೀತಿ ಜಮೀನು ಒಟ್ಟಿಗೆ ಇರುವುದರಿಂದ ಕೊಳವೆ ಭಾವಿ ತೋಡಿಸಲು ನನ್ನ ತಂದೆ ಅರ್ಜಿ ಕೊಟ್ಟಿದ್ದರು ಎಂದರೆ ಸರಿ. 3 ಎಕರೆ ಜಮೀನು ಇದ್ದವರಿಗೆ ಮಾತ್ರ ಕೊಳವೆ ಬಾವಿ ಮಂಜೂರು ಮಾಡುತ್ತಿದ್ದರು ಎಂದರೆ 2 ಎಕರೆ ಇದ್ದವರಿಗೆ ಕೊಡುತ್ತಿದ್ದರು ಎಂದು ನುಡಿಯುತ್ತಾರೆ. ಸದರಿ ಕೊಳವೆ ಬಾವಿ ತೋಡಿಸಲು ನನ್ನ ತಂದೆ ಮತ್ತು ವಾದಿಗಳ ತಂದೆ ಒಪ್ಪಿಗೆ ಪತ್ರ ಬರೆದುಕೊಂಡಿದ್ದರು ಎಂದರೆ ಸರಿಯಲ್ಲ. ಸದರಿ ಕೊಳವೆ ಬಾವಿ ತೋಡಿಸಿದ ನಂತರ ಸಮವಾಗಿ ನೀರು ಹಂಚಿಕೊಳ್ಳಬೇಕು ಎಂದು ಒಪ್ಪಿಗೆ ಆಗಿತ್ತು ಎಂದರೆ ಸರಿಯಲ್ಲ. ಸದರಿ ಕೊಳವೆ ಬಾವಿ ಯನ್ನು ನಮ್ಮ ಜಮೀನಿನಲ್ಲಿ ಹಾಕಿಸಿರುತ್ತಾರೆ. ನನ್ನ ತಂದೆ ಮತ್ತು ವಾದಿಗಳ ತಂದೆ ಇಬ್ಬರು ಒಪ್ಪಿಗೆ ಯಿಂದ ವಿದ್ಯುತ್ತ ಸಂಪರ್ಕ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಬೋರವೆಲ್ ಇದ್ದು ನೀರು ಹಂಚಿಕೊಂಡು ವ್ಯವಸಾಯ ಮಾಡುತ್ತಿದ್ದೆವು ಎಂದರೆ ಸರಿಯಲ್ಲ. 2018 ರಲ್ಲಿ ವಾದಿ ಅವರ ಜಮೀನಿನಲ್ಲಿ

ಟೋಮೆಟೋ ಬೆಳೆ ಬೆಳೆದಿದ್ದರು ಎಂದರೆ ಸರಿಯಲ್ಲ. ಸದರಿ ಬೆಳೆಗೆ ನೀರು ಕೊಡದೇ ಬೆಳೆ ನಷ್ಟ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ನನ್ನ ತಂದೆಯ ವಿರುದ್ಧ ದೂರು ಕೊಟ್ಟಿದ್ದರು ಎಂದರೆ ಸರಿ. ಸದರಿ ಒಪ್ಪಂದದ ಪ್ರಕಾರ ನೀರು ಬಿಡಬೇಕು ಎಂದು ಬುದ್ದಿವಾದ ಹೇಳಿದ್ದರು ಎಂದರೆ ಸರಿಯಲ್ಲ. ನಮ್ಮ ವಿರುದ್ಧ ನೀರಾವರಿ ಇಲಾಖೆಗೆ ದೂರು ಕೊಟ್ಟಿದ್ದರು ಎಂದರೆ ಸರಿ. ಇಲಾಖೆಯವರು ಸಹ ಬುದ್ದಿವಾದ ಹೇಳಿದರು ತಿರಸ್ಕರಿಸಿರುತ್ತೇನೆ ಎಂದರೆ ಬೋರವೆಲ್ ನಲ್ಲಿ ನೀರು ಬರುತ್ತಿರಲಿಲ್ಲ ಎಂದು ನುಡಿಯುತ್ತಾರೆ. ನಂತರ ಕಾರ್ಯಪಾಲಕ ಅಭಿಯಂತರರ ಒಪ್ಪಂದದ ಪ್ರಕಾರ ನೀರು ಬಿಡಬೇಕು ಎಂದು ದಿನಾಂಕ 22.02.2018 ರಂದು ನನ್ನ ತಂದೆಗೆ ನೋಟಿಸ್ ಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ಒಪ್ಪಂದದ ಷರತ್ತು ಪಾಲನೆ ಮಾಡದೇ ಇದ್ದರೆ ಸರ್ಕಾರಿ ಸೌಲಭ್ಯವನ್ನು ರದ್ದುಪಡಿಸುತ್ತೇವೆ ಎಂದು ತಿಳಿಸಿದ್ದರು ಎಂದರೆ ಸರಿಯಲ್ಲ. ಕೊಳವೆ ಬಾವಿಯಲ್ಲಿ ನನಗೆ ಇರುವಷ್ಟು ಹಕ್ಕು ವಾದಿಗೂ ಇದೆ ಎಂದರೆ ಸರಿಯಲ್ಲ. ದಿ 20.06.2017 ರಲ್ಲಿ ಬೋರವೆಲ್ ಪೈಪುಗಾಗಿ ನನ್ನ ತಂದೆ 3,000 ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ಸರ್ವೇ ನಂ 111/3 ರಲ್ಲಿ ಸರ್ಕಾರದಿಂದ 2019 ರಲ್ಲಿ SC/ST ಸೌಲಭ್ಯ ಯೋಜನೆ ಅಡಿಯಲ್ಲಿ ಕೊಳವೆ ಬಾವಿ ಕೊರಸಿರುತ್ತೇನೆ ಎಂದು ಬರೆಸಿರುತ್ತೇನೆ ಎಂದರೆ ಸರಿ. ಆ ರೀತಿ ಯೋಜನೆ ಅಡಿಯಲ್ಲಿ ಕೊಳವೆ ಬಾವಿ ಹಾಕಿಸಿರುತ್ತೇನೆ ಎಂದು ತೋರಿಸಲು ದಾಖಲೆ ಕೊಟ್ಟಿರುತ್ತೇನೆ. 2017 ರಲ್ಲಿ ಜಲಸಂಪನ್ಮೂಲ ಇಲಾಖೆಯಿಂದ ಸರ್ವೇ 46/2 ರಲ್ಲಿ ಕೊಳವೆ ಬಾವಿ ಸೌಲಭ್ಯ ಪಡೆದುಕೊಂಡಿರುತ್ತೇನೆ ಎಂದು ಬರೆಸಿದ್ದೇನೆ ಎಂದರೆ ಆ ಜಮೀನು ನಮ್ಮದು ಅಲ್ಲ ಎಂದು ನುಡಿಯುತ್ತಾರೆ. ಸರ್ವೇ ನಂ 111/3 ಮತ್ತು 46/2 ರ ಸ್ವತ್ತಿಗೆ 2 ಕಿ.ಮೀ ಆಗುತ್ತದೆ ಎಂದು ಬರೆಸಿದ್ದೇನೆ ಎಂದರೆ ಸರಿಯಲ್ಲ. ಸರ್ವೇ 111/2 ಮತ್ತು 111/3 ರಲ್ಲಿ ಕೊಳವೆ ಬಾವಿ ಕೊರಸಿರುತ್ತೇವೆ ಎಂದರೆ ಸರಿಯಲ್ಲ. ನನ್ನ ತಂದೆಯನ್ನು ಚಿಕ್ಕನಾಯಕ ಉರ್ಫ ಪುಟ್ಟಚಿಕ್ಕನಾಯಕ ಎಂದು ಕರೆಯುತ್ತಾರೆ. ಸರ್ವೇ ನಂ 111/3 ಮತ್ತು 76/2 ರಲ್ಲಿ ಆಸ್ತಿ ಇರುತ್ತದೆ. ವಾದಿಗಳ ತಂದೆ ಮತ್ತು 1 ನೇ ಪ್ರತಿವಾದಿಗಳ ನಡುವೆ ಒಪ್ಪಂದ ಪತ್ರ ಆಗಿತ್ತು ಎಂದರೆ ಸರಿಯಲ್ಲ. ಕೊಳವೆ ಬಾವಿಯಲ್ಲಿ ವಾದಿ ಸಮನಾದ ಹಕ್ಕು ಇದ್ದರೂ ಸಹ ನೀರು ಬಿಡದೇ ತೊಂದರೆ ಕೊಡುತ್ತಿದ್ದರು ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ  ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

**ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹೆಚ್.ಡಿ. ಕೋಟೆ.**